# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

***Spl.C.No.158/2021***

PW.1
CW.1

ದಿನಾಂಕಃ 01-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಹೆಸರುಃ ಬಸ್ತಪ್ಪ
ತಂದೆಯ ಹೆಸರುಃ ಸಂಜೀವಪ್ಪ
ವಯಸ್ಸುಃ 55 ವರ್ಷ
ವೃತ್ತಿಃ ಕೂಲಿ
ವಾಸಸ್ಥಳಃ ಗೂಲಹಳ್ಳಿ

**ಮುಖ್ಯ ವಿಚಾರಣೆಃ ಸರ್ಕಾರಿ** ಅಭಿಯೋಜಕ**ರಿಂದ**

ಚಾಸಾಃ 2 ನನ್ನ ತಮ್ಮ, ಚಾಸಾಃ 3 ನನ್ನ ಪತ್ನಿ, ಚಾಸಾಃ4 ಗೊತ್ತಿಲ್ಲ. ಚಾಸಃ 5 ನನ್ನ ಅಳಿಯ, ಚಾಸಾಃ 6 ನನ್ನ ಬಾವಮೈದುನ, ಚಾಸಃ 7 ನನ್ನ ಅಣ್ಣ, ಚಾಸಾಃ 8 ನನ್ನ ಅತ್ತಿಗೆಯ ಮಗ, ಚಾಸಾಃ 9, 10 ನನ್ನ ಸಂಬಂದಿಕರು. ಚಾಸಾಃ 11 ನನ್ನ ಅಳಿಯ, ಚಾಸಾಃ 12 ಸಂಬಂದದಲ್ಲಿ ನನಗೆ ಮಗನಾಗಬೇಕು. ನನಗೆ ಒಂದು ಗಂಡು, ಎರಡು ಹೆಣ್ಣು ಮಕ್ಕಳು. ನನ್ನ ಮಗನ ಹೆಸರು ಸಂಜೀವರಾಯಪ್ಪ. ಆತ ಅವಿವಾಹಿತ. 3 ರಿಂದ 8 ಗೊತ್ತು. ಆತನಿಗೆ 25 ವರ್ಷ ವಯಸ್ಸು ಆಗಿತ್ತು. ನಾನು ಆದಿಕರ್ನಾಟಕ ಜಾತಿಗೆ ಸೇರಿದವನು. 1 ರಿಂದ 3 ಆರೋಪಿಗಳು ಗೊತ್ತು. ನ್ಯಾಯಾಲಯದ ಮುಂದೆ ಹಾಜರಿರುವ ಮೂರು ಜನ ಅರೋಪಿಗಳು ನಮ್ಮ ಊರಿನವರು ಅರೋಪಿಗಳು ವಕ್ಕಲಿಗ ಜಾತಿಗೆ ಸೇರಿದವರು.

2. ನನ್ನ ಮಗ ಸಂಜೀವರಾಯಪ್ಪ 3 ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ನನ್ನ ಮಗನನ್ನು ಹೊಡೆದು ಸಾಯಿಸಿರುತ್ತಾರೆ. ನಾನು ಮತ್ತು ನನ್ನ ಪತ್ನಿ ಹಿಂದೂಪುರ ಆಸ್ಪತ್ರೆಗೆ ಹೋಗಿದ್ದೆವು. ಚಾಸಾಃ 2 ಹನುಮಂತರಾಯಪ್ಪ ನನಗೆ ಫೋನ್ ಮಾಡಿ ಸಂಜೀವರಾಯಪ್ಪ

ತೀರಿಕೊಂಡಿರುತ್ತಾನೆ ಬಾ ಎಂದು ಹೇಳಿದರು. ನಾನು ಕೂಡಲೇ ಊರಿಗೆ ಬಂದಿದ್ದೆ. ನನ್ನ ಮಗನ ಮೃತದೇಹವನ್ನು ನಾನು ನೋಡಿದಾಗ ಆತನ ದೇಹ  ನೇಣು ಹಾಕಿದ ಸ್ಥಿತಿಯಲ್ಲಿ ಇತ್ತು. ಆತನ ಮುಖ ಮೇಲಕ್ಕೆ ಇತ್ತು. ಆತ ನಮ್ಮ ಮನೆಯಲ್ಲಿ ಮಕ್ಕಳಿಗೆ ಹಾಕುವ ಬೆಲ್ಟನ್ನು ಕತ್ತಿಗೆ ಹಾಕಿಕೊಂಡು ನೇಣು ಹಾಕಿಕೊಂಡಿದ್ದ. ಆತ ನೇಣುಹಾಕಿಕೊಂಡಿದ್ದ ಸ್ಥಳದಲ್ಲಿ ಕೆಳಗೆ ಚೀಟಿ ಬಿದ್ದಿತ್ತು. ನಾನು ಚೀಟಿಯನ್ನು 3 ನೇ ಅರೋಪಿ ಲಕ್ಷೀನಾರಾಯಪ್ಪನವರಿಗೆ ಕೊಟ್ಟಿದ್ದೆ. ಆತ ಚೀಟಿಯನ್ನು ಓದಿನೋಡಿ ನಂತರ ಹರಿದುಹಾಕಿದ. ರಂಗನಾಥ, ನರಸಪ್ಪ, ಲಕ್ಷೀನಾರಾಯಣ ಇವರು ಹೊಡೆದು ಸಾಯಿಸಿರುತ್ತಾರೆ ಎಂದು ಚೀಟಿಯಲ್ಲಿ ಬರೆದಿತ್ತು. ನನ್ನ ಮಗನಿಗೆ ಓದು ಬರಹ ಗೊತ್ತಿತ್ತು. ಆತ 8 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದ. ನಾನು ಆತ ನೇಣುಹಾಕಿಕೊಂಡಿದ್ದ ಸ್ಥಳದಲ್ಲಿ ನೋಡಿದ ಚೀಟಿ ನನ್ನ ಮಗ ಬರೆದಿದ್ದು.

3. ನನ್ನ ಮಗ ಮತ್ತು ರಂಗನಾಥ, ನರಸಪ್ಪ,ಲಕ್ಷ್ಮೀನಾರಾಯಣಪ್ಪ ಅರೋಪಿತರ ಅಣ್ಣ ತಮ್ಮಂದಿರ ಅಂಗಡಿಗೆ ಹೋಗಿದ್ದು  1 ನೇ ಅರೋಪಿ ನರಸಯ್ಯನಿಗೆ ನನ್ನ ಮಗನ ಕೈ ತಾಗಿರುತ್ತದೆ. ನನ್ನ ಮಗನ ಕೈ ಆತನಿಗೆ ತಾಗಿದ ಕಾರಣ ಆತ ನನ್ನ ಮಗನಿಗೆ ಬೈದು ಹೊಡೆದಿರುತ್ತಾರೆ.  ನರಸಯ್ಯ ಮತ್ತು ರಂಗನಾಥ ಮಾರನೇ ದಿನ ನಮ್ಮ ಮನೆಯ ಬಳಿಗೆ ಬಂದು ನನ್ನ ಮಗನನ್ನು ನೇಣುಹಾಕಿರುತ್ತಾರೆ.

4. ನಂತರ ನಾನು ಮಿಡಿಗೇಶಿ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದೆ. ನಾನು ಹೆಬ್ಬೆಟ್ಟಿನ ಗುರುತು ಹಾಕುತ್ತೇನೆ. ಸಾಕ್ಷಿ ದೂರು ಮತ್ತು ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತಾರೆ. ದೂರನ್ನು ನಿಪಿ.1 ಎಂದು ಗುರುತಿಸಲಾಯಿತು. ನಾನು ದೂರನ್ನು ದೇವರಾಜು ಮೂಲಕ ಬರೆಯಿಸಿದ್ದೆ.  ದೂರು ಕೊಟ್ಟ ನಂತರ ಮಿಡಿಗೇಶಿ ಪೊಲೀಸರು ನಮ್ಮ ಊರಿಗೆ ಬಂದಿದ್ದರು. ಪೊಲೀಸರು ನಮ್ಮ ಮನೆಗೆ ಬಂದು ಪರಿಶೀಲನೆ ಮಾಡಿದರು. ನಾನು, ನನ್ನ ಪತ್ನಿ ನನ್ನ ಮಗಳು ರಾಮಲೀಲಾ ಸ್ಥಳದಲ್ಲಿ ಇದ್ದೆವು. ಪೊಲೀಸರು ಸ್ಥಳಕ್ಕೆ ಬಂದಾಗ ನಾನು ಒಂದು ದಾಖಲಾತಿಗೆ ಹೆಬ್ಬೆಟ್ಟಿನ ಗುರುತು ಹಾಕಿದ್ದೆ. ಸಾಕ್ಷಿ ಸ್ಥಳ ಮಹಜರ್ ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು ಗುರುತಿಸಲಾಯಿತು. ಪೊಲೀಸರು ಸ್ಥಳಕ್ಕೆ ಬಂದಾಗ ನನ್ನ ಮಗ ನೇಣುಹಾಕಿಕೊಂಡಿದ್ದ ಸ್ಥಳದಲ್ಲಿದ್ದ ಒಂದು ಬೆಲ್ಟನ್ನು ನೋಡಿದರು. 3 ನೇ ಅರೋಪಿ ಹರಿದು ಹಾಕಿದ್ದ ಪತ್ರದ ಚೂರುಗಳು ಮನೆಯಲ್ಲಿ ಇದ್ದವು  ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಬಟ್ಟೆಯನ್ನು ನಾನು ಈ ಹಿಂದೆ ನೋಡಿಲ್ಲ.  ಸಾಕ್ಷಿ ಹರಿದ ಪತ್ರದ ಚೂರುಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.3 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ನಡೆಸಲು ಸರ್ಕಾರಿ ಅಬಿಯೋಜಕರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಬಿಯಾೀಜಕರಿಂದ

5. 1 ನೇ ಅರೋಪಿ ಪತ್ನಿಯ ಜೊತೆ ನನ್ನ ಮಗ ಅಸಭ್ಯವಾಗಿ ವರ್ತನೆ ಮಾಡಿದ್ದ ಕಾರಣ 1 ರಿಂದ 3 ನೇ ಆರೋಪಿಗಳು ನನ್ನ ಮಗನೊಂದಿಗೆ ಗಲಾಟೆ ಮಾಡಿದ್ದರು ಎಂದರೆ ಸರಿ. ದಿನಾಂಕಃ 18-11-2010 ರಂದು ಬೆಳಿಗ್ಗೆ 10 ಗಂಟೆಗೆ ಅರೋಪಿಗಳು ನಮ್ಮ ಮನೆಗೆ ಬಂದು ನನ್ನ ಮಗ ಒಬ್ಬನೇ ಇದ್ದಾಗ ಹೊಡೆದು ಹಲ್ಲೆ ಮಾಡಿದ್ದರು ಎಂದರೆ ಸರಿ. ಆರೋಪಿಗಳು ಹಲ್ಲೆ ಮಾಡಿದ್ದ ಕಾರಣ ನನ್ನ ಮಗ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸ್ಥಳದಲ್ಲಿ ಬಿದ್ದಿದ್ದ ಪತ್ರವನ್ನು ನನ್ನ ತಮ್ಮ ಚಾಸಾಃ2 ಹನುಮಂತರಾಯಪ್ಪ ಓದಲು ಬದ ಕಾರಣ 3 ನೇ ಅರೋಪಿಗೆ ಕೊಟ್ಟಿದ್ದ ಎಂದರೆ ಸರಿ. ಸದರಿ ಪತ್ರದಲ್ಲಿ ನನ್ನ ಮಗ ತನ್ನ ಸಾವಿಗೆ 1 ರಿಂದ 3 ಅರೋಪಿಗಳೇ ಕಾರಣ ಎಂದು ಬರವಣಿಗೆ ಮಾಡಿತ್ತು ಎಂದು ನನಗೆ ತಿಳಿದುಬಂದಿತ್ತು ಎಂದರೆ ಸರಿಯಲ್ಲ. 3 ನೇ ಅರೋಪಿ ಸದರಿ ಪತ್ರವನ್ನು ಓದಿ ನಂತರ ಅದನ್ನು ಹರಿದು ಬಿಸಾಡಿದ್ದ ಎಂದರೆ ಸರಿ..

6. ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಬಟ್ಟೆಯಿಂದ ನನ್ನ ಮಗ ನೇಣು ಹಾಕಿಕೊಂಡಿದ್ದ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಬಟ್ಟೆಯನ್ನು ಮಹಜರ್ ವೇಳೆ ಅಮಾತನ್ತುಪಡಿಸಿಕೊಂಡಿದ್ದರು ಎಂದರೆ ಸರಿ. ಸದರಿ ಬಟ್ಟೆಯನ್ನು ಮು.ಮಾ.1 ಎಂದು ಗುರುತಿಸಲಾಯಿತು. ಅರೋಪಿಗಳು ನನ್ನಮಗನಿಗೆ ಹೊಡೆದು ನೇಣು ಹಾಕಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿಗಳ ಪರಃ ಶ್ರೀ. ಬಿ.ಕೆ.ಪಿ.ಎಸ್ ವಕೀಲರಿಂದ

7. ನಾನು ಒಬ್ಬ ಹೆಣ್ಣು ಮಗಳಿಗೆ ವಿವಾಹ ಮಾಡಿರುತ್ತೇನೆ. ಇನ್ನೊಬ್ಬ ಮಗಳು ವಿದ್ಯಾಭ್ಯಾಸ ಮಾಡುತ್ತಿದ್ದಾಳೆ. ನಾನು, ನನ್ನ ಪತ್ನಿ ಮತ್ತು ನನ್ನ ಮಗಳು ಜನಕಲೋಟಿಯಲ್ಲಿ ವಾಸವಾಗಿದ್ದೆವು. ನನ್ನ ಮಗ ಸಂಜೀವರಾಯಪ್ಪ ಗೂಲಹಳ್ಳಿಯಲ್ಲಿ ಒಬ್ಬನೇ ವಾಸವಾಗಿದ್ದ. ಗೂಲಹಳ್ಳಿಯಿಂದ ಜನಕಲೋಟಿ 15 ಕಿಮೀ ಅಂತರವಿರುತ್ತದೆ. ನಾನು, ನನ್ನ ಪತ್ನಿ ಕೂಲಿ ಕೆಲಸಕ್ಕೆ ಹೋಗುತ್ತಿದ್ದೆವು. ನನ್ನ ಮಗಳು ಅದೇ ಊರಿನಲ್ಲಿ ಶಾಲೆಗೆ ಹೋಗುತ್ತಿದ್ದಳು. ನನ್ನ ಮಗ ನನ್ನ ಮಾತು ಕೇಳುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗನೇ ಗೂಲಹಳ್ಳಿಯಲ್ಲಿ ಅಡುಗೆ ಮಾಡಿಕೊಂಡು ಊಟ ಮಾಡುತ್ತಿದ್ದ. ಕೆಲವೊಂದು ಬಾರಿ ಹೋಟೆಲ್ ನಲ್ಲಿ ಊಟ ಮಾಡುತ್ತಿದ್ದ. ನನ್ನ ಮಗ ಸ್ನೇಹಿತರ ಜೊತೆ ಸೇರಿ ಮಧ್ಯಪಾನ ಮಾಡುತ್ತಿದ್ದ ಎಂದರೆ ಸರಿಯಲ್ಲ.

8. ನಾವು ಜನಕಲೋಟಿ ಅಸ್ಪತ್ರೆಗೆ ಚಿಕಿತ್ಸೆಗೆ ಹೋಗಿದ್ದೆವು ಎಂದರೆ ಸರಿಯಲ್ಲ. 3-4 ಜನ ಬೆಂಗಳೂರಿನ ರಾಮಯ್ಯ ಆಸ್ಪತ್ರೆಗೆ ಹೋಗಿದ್ದೆವು. 8 ದಿನ ಸದರಿ ಅಸ್ಪತ್ರೆಯಲ್ಲಿ ದಾಖಲಾಗಿದ್ದೆವು. ನನ್ನ ಮಗ ನನ್ನೊಂದಿಗೆ ಆಸ್ಪತ್ರೆಗೆ ಬಂದಿರಲಿಲ್ಲ. ನನ್ನ ತಮ್ಮ ನಾನು ಹಿಂದೂಪುರದ ಅಸ್ಪತ್ರೆಗೆ ಹೋಗಿದ್ದಾಗ ನನ್ನ ಮಗ ತೀರಿಕೊಂಡಿರುತ್ತಾರೆ ಎಂದು ಪೋನ್ ಮಾಡಿದ್ದ. ನಾನು ಅಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿರಲಿಲ್ಲ. ನಾನು ಬೆಂಗಳೂರಿನ ರಾಮಯ್ಯ ಅಸ್ಪತ್ರೆಯಲ್ಲಿದ್ದಾಗ ನನ್ನ ಮಗ ತೀರಿಕೊಂಡ ಬಗ್ಗೆ ಪೋನ್ ಬಂದಿರಲಿಲ್ಲ. ನನ್ನ ಬಳಿ ಪೋನ್ ಇರಲಿಲ್ಲ. ನಾನು ಜನಕಲೋಟಿಯಲ್ಲಿದ್ದಾಗ ನನ್ನ ಪೋನ್ ಬೇರೆಯವರಿಗೆ ಪೋನ್ ಮಾಡಿ ತಿಳಿಸಿದ. ನನ್ನ ತಮ್ಮ ಹನುಮಂತರಾಯಪ್ಪ ಜೂಲಪ್ಪನವರಿಗೆ ಪೋನ ಮಾಡಿ ನನ್ನ ಮಗ ತೀರಿಕೊಂಡ ವಿಚಾರ ತಿಳಿಸಿದ. ಸೋಮವಾರ ರಾತ್ರಿ 10 ಗಂಟೆಗೆ ನನ್ನ ಮಗ ತೀರಿಕೊಂಡ ವಿಚಾರ ನನಗೆ ತಿಳಿಯಿತು. ನಾನು, ನನ್ನ ಪತ್ನಿ, ನನ್ನ ಮಕ್ಕಳು, ನನ್ನ ಅತ್ತೆ ಮತ್ತು ಅಕೆಯ ಮಕ್ಕಳು  ಕೂಡಲೇ ಜನಕಲೋಟಿಯಿಂದ ಗೂಲಹಳ್ಳಿಗೆ ಬಂದಿದ್ದೆವು.  ನನಗೆ ಮಾಹಿತಿ ಬಂದ ಕೂಡಲೇ ಊರಿನಿಂದ ಹೊರಟಿದ್ದೆವು 10 ಗಂಟೆಯ ನಂತರ ಗೂಲಹಳ್ಳಿಗೆ ಬಂದಿದ್ದೆವು. ನಾನು ನನ್ನ ಮಗನ ಮನೆಯ ಬಳಿ ಹೋದಾಗ ಮನೆಯ ಬಾಗಿಲು ತೆಗೆದಿತ್ತು. ನಾನು ಮನೆ ಬಳಿ ಹೋದಾಗ 10 ಜನ ಇದ್ದರು. ನಾನು ಸ್ಥಳದಲ್ಲಿದ್ದವರನ್ನು ವಿಚಾರಿಸಿದ್ದೆ. ಅವರು ನಮಗೆ ಗೊತ್ತಿಲ್ಲ ಎಂದು ಹೇಳಿದರು. ನನ್ನ ಮಗ ನನಗೆ ಪೋನ್ ಮಾಡಿ ಅತನಿಗೆ ಯಾರಾದರೂ ತೊಂದರೆ ಕೊಡುತ್ತಿದ್ದಾರಾ ಮತ್ತು ಹೊಡೆದಿದ್ದಾರಾ ಎಂದು ಪೋನ್ ಮಾಡಿ ತಿಳಿಸಿರಲಿಲ್ಲ. ನನ್ನ ಮಗ ಆತನಿಗೆ ಯಾರಾದರೂ ತೊಂದರೆ ಕೊಟ್ಟರೆ ನನಗೆ ಹೇಳುತ್ತಿರಲಿಲ್ಲ. ಆತ ಪೋನ್ ನಲ್ಲಿ ಮಾತನಾಡುತ್ತಿರಲಿಲ್ಲ. ನನಗೂ ನನ್ನ ಮಗನಿಗೂ ವಿಶ್ವಾಸ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ಹನುಮಂತರಾಯಪ್ಪ ನನ್ನ ಮಗನಿಗೆ ಯಾರಾದರೂ

ತೊಂದರೆ ಕೊಟ್ಟರೆ ನನಗೆ ತಿಳಿಸುತ್ತಿದ್ದ ಎಂದರೆ ಸರಿಯಲ್ಲ. ನನ್ನ ತಮ್ಮ ಹನುಮಂತರಾಯಪ್ಪ ನನ್ನಮಗ ಸಾಯುವ ಮೊದಲು ಅತನಿಗೆ ಯಾರಾದರೂ ತೊಂದರೆ ಕೊಟ್ಟ ಬಗ್ಗೆ ನನಗೆ ತಿಳಿಸಿರಲಿಲ್ಲ.

9. ಚೀಟಿ ಒಂದು ಹಾಳೆಯ ರೀತಿ ಇತ್ತು ಅದನ್ನು ಹರಿದು ಹಾಕಿದರು. ನಾನು ಚೀಟಿಯನ್ನು ನೋಡಿದಾಗ ಸುಮಾರು 10 ಜನ ಇದ್ದರು. ನನಗೆ ಸ್ಥಳದಲಿದ್ದ 10 ಜನರ ಹೆಸರು ಈಗ ಹೇಳಲು ಸಾಧ್ಯವಿಲ್ಲ. ಸ್ಥಳದಲ್ಲಿ ಚೀಟಿ ಇರಲಿಲ್ಲ ಎಂದರೆ ಸರಿಯಲ್ಲ. ದೂರಿನಲ್ಲಿ ದೇವರಾಜು ಬರವಣಿಗೆ ಮಾಡಿದ ನಂತರ ನನಗೆ ಹೆಬ್ಬೆಟ್ಟು ಹಾಕು ಎಂದು ಹೇಳಿದ್ದು ಅದರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ದೂರನ್ನು ಓದಿ ತಿಳಿದುಕೊಂಡಿರಲಿಲ್ಲ.

10. ಪೊಲೀಸರು ಬರುವವರೆಗೂ ನನ್ನ ಮಗನ ಮೃತದೇಹ ನೇಣಿನ ಸ್ಥಿತಿಯಲ್ಲಿ ಇತ್ತು. ನಾನು ದೇಹ ಇಳಿಸಿರಲಿಲ್ಲ. ನನ್ನ ಮಗನ ಮೃತದೇಹವನ್ನು ಮೈಲಾರಪ್ಪ ನೇಣಿನಿಂದ ಇಳಿಸಿದ. ಮಹಜರ್ ನಲ್ಲಿ ಏನು ಬರವಣಿಗೆ ಮಾಡಿದೆ ನನಗೆ ಗೊತ್ತಿಲ್ಲ. ಮಹಜರ್ ವೇಳೆ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಮಗ ನೇಣುಹಾಕಿಕೊಂಡಿದ್ದ ಬೆಲ್ಟನ್ನು ಕುಯ್ದುರು. ತೆಗೆದುಕೊಂಡು ಹೋಗಿದ್ದರೋ ಇಲ್ಲವೋ ಗೊತ್ತಿಲ್ಲ. ಪೊಲೀಸರು ಸ್ಥಳದಲ್ಲಿ ಯಾವ ವಸ್ತುಗಳನ್ನು ತೆಗೆದುಕೊಂಡು ನನಗೆ ಗೊತ್ತಿಲ್ಲ. ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಮು.ಮಾ,1 ನ್ನು ನೋಡುತ್ತಿದ್ದೇನೆ ಎಂದರೆ ಸರಿ.

11. ನನ್ನ ಮಗ ಊರಿನಲ್ಲಿ ಪುಂಡಾಡಿಕೆ ಮಾಡಿಕೊಂಡಿದ್ದ ಎಂದರೆ ಸರಿಯಲ್ಲ. ನನ್ನ ಮಗ ಊರಿನಲ್ಲಿ ಹೆಣ್ಣು ಮಕ್ಕಳನ್ನು ಕೀಟಲೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ನನ್ನ ಮಗ ಊರಿನಲ್ಲಿ ಹೆಣ್ಣು ಮಕ್ಕಳನ್ನು ಕೀಟಲೆ ಮಾಡುತ್ತಿದ್ದ ವಿಚಾರಕ್ಕೆ 2 ಮತ್ತು 3 ನೇ ಅರೋಪಿಗಳು ನನ್ನ ಉಪಸ್ಥಿತಿಯಲ್ಲಿ ನನ್ನ ಮಗನಿಗೆ ಬುದ್ದಿವಾದ ಹೇಳಿದ್ದರು ಎಂದರೆ ಸರಿ. ದೇವರಾಜ ನನ್ನ ಮಗ ಪರ ಆಗ ನಿಂತಿದ್ದರು ಎಂದರೆ ಸರಿಯಲ್ಲ. ನನ್ನ ಮಗ ಮನನೊಂದು ಹೆಚ್ಚು ಮಧ್ಯಪಾನ ಮಾಡಿ ತನ್ನ ಸ್ವಇಚ್ಛೆಯಿಂದಲೇ ನೇಣು ಹಾಕಿಕೊಂಡಿದ್ದ ಎಂದರೆ ಸರಿಯಲ್ಲ. ಅರೋಪಿಗಳಿಗೆ ಬುದ್ದಿ ಕಲಿಸಲು ದೇವರಾಜ ನನ್ನಮಗ ಮೃತನಾಗಿದ್ದ ಕಾರಣ ಅತನೇ ದೂರು ತಯಾರು ಮಾಡಿದ್ದ ಎಂದರೆ ಸರಿಯಲ್ಲ. ಸಾಕ್ಷಿ ನಾನೇ ಹೇಳಿ ದೂರು ಬರೆಸಿದ್ದೆ ಎಂದು ನುಡಿಯುತ್ತಾರೆ. ನನ್ನ ಮಗನ ಸಾವಿಗೂ ಅರೋಪಿಗಳಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ

ಸರಿಯಲ್ಲ. ನನ್ನ ಮಗ ಮೃತನಾದ ನಂತರ ನಾನು ಸರ್ಕಾರದಿಂದ ಪರಿಹಾರ ಪಡೆದಿದ್ದೆ. ನಾನು ಮತ್ತು ದೇವರಾಜು ಪೊಲೀಸರೊಂದಿಗೆ ಶಾಮೀಲಾಗಿ ಅರೋಪಿಗಳು ನಮಗೆ ಊರಿನಲ್ಲಿ ತಪ್ಪು ಮಾಡಿದಾಗ ಬುದ್ದಿ ಹೇಳುತ್ತಾರೆ ಎಂದು ಅರೋಪಿಗಳಿಗೆ ಬುದ್ದಿ ಕಲಿಸಲು ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. 3 ನೇ ಅರೋಪಿ ನಮ್ಮ ಮನೆ ಬಳಿ ಬಂದಿರಲಿಲ್ಲ ಮತ್ತು ಪತ್ರ ಹರಿದುಹಾಕಿರಲಿಲ್ಲ ಎಂದರೆ ಸರಿಯಲ್ಲ. ಅರೋಪಿ ಪತ್ರವನ್ನು ಎಷ್ಟು ಚೂರಾಗಳಾಗಿ ಹರಿದಿದ್ದರು ನಾನು ಎಣಿಕೆ ಮಾಡಿರಲಿಲ್ಲ. ನಿಪಿ.3 ಕ್ಕೂ 3 ನೇ ಅರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ಅರೋಪಿಗಳಿಗೆ ತೊಂದರೆ ಕೊಡಲು ಈ ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

3 ನೇಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.